ದಿನಾಂಕ ಃ 12-01-2022 ಓ ಎಸ್ ನಂ. 290/2017

ಡಿ. ಡಬ್ಲ್ಯು - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಶ್ರೀ ಎಸ.ಎಸ.ಎ ವಾದಿ ಪರ ವಕೀಲರಿಂದಃ</u>

ನಾನು ದ್ವಿತಿಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಲಿಖಿತ ಹೇಳಿಕೆಗೆ ನಾನೇ ಮಾಹಿತಿ ನೀಡಿರುತ್ತೇನೆ. 2 ನೇ ಪ್ರತಿವಾದಿಯ ಆರೋಗ್ಯವಾಗಿ ಇದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯು ತನ್ನ ಪರವಾಗಿ ಸಾಕ್ಷಿಯನ್ನು ಹೇಳುವುದಕ್ಕೆ ಸಾಮಾನ್ಯ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. ದಾವಾ ಆಸ್ತಿಯನ್ನು ಬಿಟ್ಟು ನನಗಾಗಲಿ ಅಥವಾ 2 ನೇ ಪ್ರತಿವಾದಿಗಾಗಲಿ ವಣ್ಣೂರು ಗ್ರಾಮದಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ವಣ್ಣೂರು ಗ್ರಾಮದಲ್ಲಿ ನನ್ನ ಹೆಸರಿನಲ್ಲಿ ಜಮೀನಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತ ಆಸ್ತಿ ನಂ. 371 ಇದು ನಮ್ಮ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಗ್ರಾಮ ಪಂಚಾಯತಿ ಆಸ್ತಿ ನಂ. 371 ಇದು 60 ಅಡಿ ಉದ್ದ ಹಾಗೂ 23 ಅಡಿ ಅಗಲ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಪಾಲಿಗೆ ಗ್ರಾಮ ಪಂಚಾಯತಿ ಆಸ್ತಿ ನಂ. 371 ರಲ್ಲಿ 23 ಅಡಿ ಅಗಲ 20 ಅಡಿ ಉದ್ದ ಬಂದಿರುತ್ತದೆ. ಪೂರ್ವ ಪಶ್ಚಿಮ 20 ಅಡಿ ಉತ್ತರ ದಕ್ಷಿಣ 23 ಅಡಿ ಇರುತ್ತದೆ. ಸದರಿ ನನ್ನ ಬಂದಂತಹ ಪಾಲಿನಲ್ಲಿ ಉತ್ತರಕ್ಕೆ 4 ಇಂಚನ್ನು ಬಿಟ್ಟು ಕಟ್ಟಡವನ್ನು ಕಟ್ಟಿಕೊಂಡಿರುತ್ತೇನೆ. ನನ್ನ ಕ್ಷೇತ್ರ ಎಷ್ಟು ಇರುತ್ತದೆ ಅಷ್ಟಕ್ಕೆ ಗೋಡೆಯನ್ನು ಕಟ್ಟಿಕೊಂಡಿರುತ್ತೇನೆ ಎಂದರೆ ಸರಿ. ಉತ್ತರ ದಿಕ್ಕಿನಲ್ಲಿ ಮೆಟ್ಟಿಲುಗಳು ಗೋಡೆಯನ್ನು ಬಿಟ್ಟು ಹೊರೆಗಡೆ ಇದೆ ಎಂದರೆ ಸರಿ. ಪೂರ್ವ ದಿಕ್ಕಿಗೆ ಚರಂಡಿ ಇರುವುದು ಗ್ರಾಮ ಪಂಚಾಯತಿಯ ಆಸ್ತಿ ಎಂದರೆ ಸರಿ. ಬೋರವೆಲ್ ಚರಂಡಿ ಒಳಗೆ ಇರುತ್ತದೆ ಎಂದರೆ ಸರಿಯಲ್ಲ. ನಿಡಿ-14 ನ್ನು ತೋರಿಸಿ ಗೋಡೆಗೆ ಹಚ್ಚಿ ಚರಂಡಿ ಇರುತ್ತದೆ ಎಂದರೆ ಸರಿ. ನಿಡಿ-13 ನ್ನು ತೋರಿಸಿ ಬೋರವೆಲ ಚರಂಡಿ ಒಳಗೆ ಇದೆ ಎಂದರೆ ಸರಿಯಲ್ಲ. ಪೂರ್ವದೊಳಗಿರುವ ಗೋಡೆಯು ಸಾರ್ವಜನಿಕ ಆಸ್ತಿಯಲ್ಲಿ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉತ್ತರ ದಿಕ್ಕಿನಲ್ಲಿ ಕಟ್ಟಿರುವ ಮೆಟ್ಟಿಲುಗಳು ಮತ್ತು ಗೋಡೆ ಸಾರ್ವಜನಿಕ ರಸ್ತೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಮೆಟ್ಟಿಲು ಮತ್ತು ಗೊಡೆಯು ಸಾರ್ವಜನಿಕ ರಸ್ತೆಯಲ್ಲಿ ಇದ್ದರೂ ಸಹಿತ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮೂರಿನ ಒಳಗೆ ಕಿತ್ತೂರು ಚನ್ನಮ್ಮನ ಕಾಲದ ಐತಿಹಾಸಿಕ ಬಾವಿ ಇದೆ ಎಂದರೆ ಸರಿ. ಸದರಿ ಬಾವಿಗೆ ಹೋಗಬೇಕಾದರೆ ನಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿ ಹೋಗಬೇಕಾಗುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮತ್ತೊಂದು ರಸ್ತೆಯೂ ಇದೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿ ಹೋದರೂ ಬಾವಿ ಸಿಗುತ್ತದೆ ಎಂದರೆ ಸರಿ. ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ವಾದಿಗಳ ಮನೆ ಹಾಗೂ ಇನ್ನೂ ಹಲವಾರು ಜನರ ಮನೆಗಳು ಇವೆ ಎಂದರೆ ಸರಿ. ಸದರಿಯವರುಗಳ ಮನಗೆ ಹೋಗಬೇಕಾದರೆ ನಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿ ಹೋಗಬೇಕಾಗುತ್ತದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಇರುವ ರಸ್ತೆಯ ಅಗಲ ಉದ್ದವನ್ನು

ಹೇಳಲು ಬರುವುದಿಲ್ಲ. ವಾದಿಯರು ವ್ಯವಸಾಯಕ್ಕೆ ಸಂಬಂದಿಸಿದ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವುದಕ್ಕೆ ನಮ್ಮ ಮೆಟ್ಟಿಲು ಇರುವುದರಿಂದ ತೊಂದರೆ ಆಗುತ್ತದೆ ಎಂದರೆ ಸರಿಯಲ್ಲ. ನಿಡಿ-11 ನ್ನು ತೋರಿಸಿ ಅದರಲ್ಲಿ ಇರುವ ವಾಹನವು ಖಾಲಿಯಾಗಿರುತ್ತದೆ ಎಂದರೆ ಸರಿ. ಈ ರಸ್ತೆಯಲ್ಲಿ ವಾಹನದಲ್ಲಿ, ಎತ್ತಿನ ಗಾಡಿ ಅಥವಾ ಟ್ರಾಕ್ಟರದಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ತಂದರೆ ಆ ರಸ್ತೆಯು ಸಾಕಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-8 ರಿಂದ 10 ಫೋಟೊಗಳು ನಮ್ಮ ಮನೆಗೆ ಸಂಬಂದಿಸಿದವು ಎಂದರೆ ಸರಿ. ನಮ್ಮ ಮನೆಯನ್ನು 2017 ನೇ ಇಸವಿಯಲ್ಲಿ ಸಂಪೂರ್ಣವಾಗಿ ಕಟ್ಟಿರುತ್ತೇವೆ. ದಾವೆ ಮುಂದುವರೆಯುತ್ತಿರುವಾಗ ಮನೆಯನ್ನು ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪೂರ್ವದ ಗೋಡೆ ಹಾಗೂ ಉತ್ತರ ಕಡೆಯ ಗೊಡೆ ಮತ್ತು ಮೆಟ್ಟಿಲುಗಳನ್ನು ಪಂಚಾಯತಿಯ ಜಾಗದಲ್ಲಿ 1 ಪೂಟು ಅತಿಕ್ರಮಿಸಿ ನಿರ್ಮಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರು ನಾನು ಕಟ್ಟುತ್ತಿರುವ ಗೋಡೆ ಮತ್ತು ಮೆಟ್ಟಿಲು ತಿರುಗಾಡುವುದಕ್ಕೆ ತೊಂದರೆ ಆಗುತ್ತದೆ ಎಂದು ಪಂಚಾಯತಿಗೆ ಅರ್ಜಿಯನ್ನು ನೀಡಿದ್ದರು ಎಂದರೆ ಸರಿ. ಪಂಚಾಯತಿಯವರು ಅತಿಕ್ರಮಿಸಿದ ಜಾಗವನ್ನು ಕೆಡವಿ ಹಾಕಲು ಮೌಖಿಕವಾಗಿ ನಿರ್ದೇಶನವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಊರಿನಲ್ಲಿ ಪ್ರಭಾವಿ ವ್ಯಕ್ತಿ ಆದ್ದರಿಂದ ಪಂಚಾಯತಿಯವರು ನನ್ನ ಮೇಲೆ ಕಾನೂನು ಕ್ರಮನವ್ನು ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಸಹ 3 ಅಡಿ ಸಾರ್ವಜನಿಕ ರಸ್ತೆಗೆ ಸಂಬಂಧಿಸಿದಂತೆ ಮೆಲ್ಚಾವಣಿಯನ್ನು ಹಾಕಿಕೊಂಡಿರುತ್ತಾನೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ವಾದಿಯು ತನ್ನ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾರ್ವಜನಿಕರಿಗೆ ತೊಂದರೆ ಮಾಡುವ ಉದ್ದೇಶದಿಂದ ಸಾರ್ವಜನಿಕ ರಸ್ತೆಯನ್ನು ಅತಿಕ್ರಮಿಸಿ ಗೋಡೆ, ಮೆಟ್ಟಿಲು ಮತ್ತು ಚರಂಡಿಯಲ್ಲಿ ಬೋರವೆಲ್‌ನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ